# 8. ಶಕ್ತಿಮಾನ್ (ಸಂಕರಣ) ಮುಸುಕಿನಜೋಳ

ಸಂಕರಣ ಮುಸುಕಿನಜೋಳ ಇತ್ತೀಚಿನ ವರ್ಷಗಳಲ್ಲಿ ಹೆಚ್ಚಾಗಿ ಬೆಳೆಯುತ್ತಿರುವ ಆಹಾರದ ಬೆಳೆ. ಅಧಿಕ ಇಳುವರಿ ಕೊಡುವ ತಳಿಗಳು, ಸುಲಭವಾದ ಬೇಸಾಯದ ಕ್ರಮಗಳು ಹಾಗೂ ಬಿತ್ತನೆ ಮತ್ತು ಕಟಾವಿಗೆ ಲಭ್ಯವಿರುವ ಯಂತ್ರಗಳಿಂದ ಈ ಬೆಳೆಯನ್ನು ಹೆಚ್ಚು ವಿಸ್ತೀರ್ಣದಲ್ಲಿ ಬೆಳೆಯಲು ಸಾಧ್ಯವಾಗಿದೆ.

**ತಳಿಗಳು ಮತ್ತು ವಿಶೇಷ ಗುಣಗಳು**

<table>
<tr><th rowspan="2">ತಳಿಗಳು</th><th rowspan="2">ಬಿತ್ತನೆ ಕಾಲ</th><th rowspan="2">ಕಾಲಾವಧಿ (ದಿನಗಳು)</th><th colspan="2">ಇಳುವರಿ ಧಾನ್ಯ (ಕ್ವಿಂ. / ಎ)</th><th rowspan="2">ವಿಶೇಷ ಗುಣಗಳು</th></tr>
<tr><th>ನೀರಾವರಿ</th><th>ಖುಷ್ಕಿ</th></tr>
<tr><td>ಎಂ.ಎ.ಹೆಚ್ –14–5</td><td rowspan="3">ಮೇ–ಜೂನ್<br>ಸೆಪ್ಟೆಂಬರ್–ಅಕ್ಟೋಬರ್<br>ಜನವರಿ–ಫೆಬ್ರವರಿ</td><td rowspan="3">110–120</td><td>ಧಾನ್ಯ 32–35<br>ಮೇವು–12ಟನ್</td><td>ಧಾನ್ಯ 20–28<br>ಮೇವು – 8 ಟನ್</td><td>• ಎಲೆ ಅಂಗಮಾರಿ ರೋಗ, ಕೇದಿಗೆ ರೋಗ ಹಾಗೂ ಫ್ಯುಸೇರಿಯಂ ಕಾಂಡ ಕೊಳೆ ರೋಗಕ್ಕೆ ನಿರೋಧಕ ಶಕ್ತಿಯನ್ನು ಹೊಂದಿದೆ.<br>• ವಿಶೇಷವಾಗಿ ಕಟಾವಿನ ಹಂತದಲ್ಲಿ ಗಿಡಗಳು ಹಸಿರಾಗಿ ತೆನೆಯು ಪೂರ್ಣ ಪ್ರಮಾಣದಲ್ಲಿ ಒಣಗಿರುತ್ತದೆ</td></tr>
<tr><td>ಹೇಮ<br>ಎನ್.ಎ.ಎಚ್. 1137</td><td rowspan="2">ಧಾನ್ಯ 30–32<br>ಮೇವು–12 ಟನ್</td><td rowspan="2">ಧಾನ್ಯ 20–25<br>ಮೇವು – 8 ಟನ್</td><td>• ಎಲೆ ಅಂಗಮಾರಿ ರೋಗ, ಕೇದಿಗೆ ರೋಗ ಹಾಗೂ ತುಕ್ಕುರೋಗಕ್ಕೆ ನಿರೋಧಕ ಶಕ್ತಿಯನ್ನು ಹೊಂದಿದೆ<br>• ವಿಶೇಷವಾಗಿ ಕಟಾವಿನ ಹಂತದಲ್ಲಿ ಗಿಡವು ಹಸಿರಾಗಿದ್ದು, ತೆನೆಯು ಪೂರ್ಣ ಪ್ರಮಾಣದಲ್ಲಿ ಒಣಗಿರುತ್ತದೆ</td></tr>
<tr><td>ನಿತ್ಯಶ್ರೀ<br>ಎನ್.ಎ.ಎಚ್.2049</td><td>• ಎಲೆ ಅಂಗಮಾರಿ ರೋಗ, ಕೇದಿಗೆ ರೋಗ ಹಾಗೂ ತುಕ್ಕುರೋಗಕ್ಕೆ ನಿರೋಧಕ ಶಕ್ತಿಯನ್ನು ಹೊಂದಿದೆ</td></tr>
</table>

**ಬೇಸಾಯಕ್ಕೆ ಬೇಕಾಗುವ ಸಾಮಗ್ರಿಗಳು (ಎಕರೆಗೆ)**

| ಸಾಮಗ್ರಿಗಳು | ಪ್ರದೇಶಗಳು | |
|---|---|---|
| | ನೀರಾವರಿ | ಖುಷ್ಕಿ |
| ಬಿತ್ತನೆ ಬೀಜ (ಕಿ.ಗ್ರಾಂ) | 6 | 6 |
| ಕೊಟ್ಟಿಗೆ ಗೊಬ್ಬರ ಅಥವಾ ಕಾಂಪೋಸ್ಟ್ (ಟನ್) | 3 | 3 |
| **ರಸಾಯನಿಕ ಗೊಬ್ಬರಗಳು (ಕಿ.ಗ್ರಾಂ)** | | |
| ಸಾರಜನಕ | 60 | 40 |
| ರಂಜಕ | 30 | 20 |
| ಪೊಟ್ಯಾಷ್ | 15 | 10 |
| **ಲಘು ಪೋಷಕಾಂಶಗಳು (ಕಿ.ಗ್ರಾಂ)** | | |
| ಸತು | 4 | 4 |

**ಬಿತ್ತನೆ:** ಬೀಜವನ್ನು 2 ಅಡಿ ಅಂತರದ ಬೋದು ಮಾಡಿದ ಸಾಲುಗಳಲ್ಲಿ ಬೀಜದಿಂದ ಬೀಜಕ್ಕೆ 1 ಅಡಿ ಅಂತರದಲ್ಲಿ 2 ಅಂಗುಲಕ್ಕಿಂತ ಹೆಚ್ಚು ಆಳವಿಲ್ಲದಂತೆ ಬಿತ್ತನೆ ಮಾಡುವುದು. ಖುಷ್ಕಿಯಲ್ಲಿ 20 ಕಿ.ಗ್ರಾಂ. ಸಾರಜನಕ ಮತ್ತು ಶಿಫಾರಸ್ಸು ಮಾಡಿದ ಪೂರ್ತಿ ಪ್ರಮಾಣದ ರಂಜಕ, ಪೊಟ್ಯಾಷ್ ಮತ್ತು ಸತುವಿನ ಸಲ್ಫೇಟ್‌ನ್ನು ಬಿತ್ತನೆಗೆ ಮುಂಚೆ ಮಣ್ಣಿನಲ್ಲಿ ಸೇರಿಸುವುದು. ಎಕರೆಗೆ 20 ಕಿ.ಗ್ರಾಂ. ಸಾರಜನಕವನ್ನು ಮೇಲುಗೊಬ್ಬರವಾಗಿ 3–4 ವಾರದೊಳಗೆ ಕೊಡುವುದು.

# ಶಕ್ತಿಮಾನ್ ಮುಸುಕಿನ ಜೋಳ



ಶಕ್ತಿಮಾನ್ ಮುಸುಕಿನ ಜೋಳ
(ಎಂ.ಎ.ಹೆಚ್–14–5)






ಶಕ್ತಿಮಾನ್ ಮುಸುಕಿನ ಜೋಳ –ಎನ್.ಎ.ಹೆಚ್–1137 (ಹೇಮ)






ಶಕ್ತಿಮಾನ್ ಮುಸುಕಿನ ಜೋಳ –ಎನ್.ಎ.ಹೆಚ್–2049 (ನಿತ್ಯಶ್ರೀ)



ಅಂತರ ಬೆಳೆಗಳು – ಮುಸುಕಿನಜೋಳ
+ ಸೊಯಾಅವರೆ – (1:1)

ನೀರಾವರಿಯಲ್ಲಿ 20 ಕಿ.ಗ್ರಾಂ. ಸಾರಜನಕ ಮತ್ತು ಶಿಫಾರಸ್ಸು ಮಾಡಿದ ಪೂರ್ತಿ ಪ್ರಮಾಣದ ರಂಜಕ, ಪೊಟ್ಯಾಷ್ ಮತ್ತು ಸತುವಿನ ಸಲ್ಫೇಟ್‌ನ್ನು ಬಿತ್ತನೆ ಮಾಡುವುದಕ್ಕೆ ಮುಂಚೆ ಮಣ್ಣಿನಲ್ಲಿ ಸೇರಿಸುವುದು. ಮೊದಲನೇ ಮೇಲುಗೊಬ್ಬರವಾಗಿ ಎಕರೆಗೆ 20 ಕಿ.ಗ್ರಾಂ. ಸಾರಜನಕವನ್ನು ಬಿತ್ತನೆ ಮಾಡಿದ 3–4ನೇ ವಾರದಲ್ಲಿ ಕೊಟ್ಟು, ಮತ್ತೊಮ್ಮೆ 20 ಕಿ.ಗ್ರಾಂ. ಸಾರಜನಕವನ್ನು 6–7ನೇ ವಾರದಲ್ಲಿ ಕೊಡುವುದು. ಪ್ರತಿ ಸಾರಿ ಸಾರಜನಕವನ್ನು ಮೇಲುಗೊಬ್ಬರವಾಗಿ ಕೊಡುವಾಗ ಸಾಲಿನಲ್ಲಿ ಹಾಕಿ ಮಣ್ಣು ಮುಚ್ಚುವುದು ಮತ್ತು ಭೂಮಿಯಲ್ಲಿ ತೇವಾಂಶವಿರುವಂತೆ ನೋಡಿಕೊಳ್ಳುವುದು.

**ಬೀಜೋಪಚಾರ:** ಅಝೋಸ್ಪೈರಿಲಂ ಮತ್ತು ರಂಜಕ ಕರಗಿಸುವ ಜೀವಾಣು ಗೊಬ್ಬರವನ್ನು ಎಕರೆಗೆ 200 ಗ್ರಾಂ. ನಂತೆ ಬೀಜೋಪಚಾರ ಮಾಡುವುದರಿಂದ ಶಿಫಾರಸ್ಸು ಮಾಡಿದ ಸಾರಜನಕ ಮತ್ತು ರಂಜಕದ ಪ್ರಮಾಣದಲ್ಲಿ ಶೇ.50 ರಷ್ಟು ಕಡಿಮೆ ಮಾಡಬಹುದು.

**ನೀರಾವರಿ ಮತ್ತು ಅಂತರ ಬೇಸಾಯ:** ಮಣ್ಣು ಮತ್ತು ಹವಾಗುಣವನ್ನು ಅನುಸರಿಸಿ ಮರಳು ಮಿಶ್ರಿತ ಮಣ್ಣಾಗಿದ್ದಲ್ಲಿ 8 ದಿನಗಳಿಗೊಮ್ಮೆ, ಕಪ್ಪು ಭೂಮಿಯಾದಲ್ಲಿ 15 ದಿನಗಳಿಗೊಮ್ಮೆ ನೀರು ಹಾಯಿಸುವುದು. ಬೀಜ ಮೊಳೆಯುವ, ಹೂ ಬಿಡುವ ಮತ್ತು ಕಾಳು ಕಟ್ಟುವ ಸಮಯಗಳಲ್ಲಿ ತಪ್ಪದೆ ಸಾಕಷ್ಟು ನೀರು ಕೊಡುವುದು ಬಹಳ ಅವಶ್ಯಕ. ಪಾತಳಿ ನೀರಾವರಿ ಪದ್ಧತಿಯಲ್ಲಿ ಸಾಲು–ಬೋದು ವಿನ್ಯಾಸದಲ್ಲಿ ನೀರು ಉಣಿಸುವುದು ಸೂಕ್ತ. ಮೇಲುಗೊಬ್ಬರ ಕೊಟ್ಟ ನಂತರ ಮಣ್ಣು ಏರುಹಾಕುವುದು ಮತ್ತು ಮೊದಲ ಕಂತಿನ ಮೇಲುಗೊಬ್ಬರ ಕೊಡುವುದಕ್ಕೆ ಮುನ್ನ ಕುಂಟೆ ಹಾಯಿಸಬೇಕು. ಹಾಲು ತುಂಬುವ/ಕಾಳುಕಟ್ಟುವ ಸಮಯದಲ್ಲಿ ಗಿಡದ ತುದಿಯನ್ನು ಮುರಿಯಬಾರದು, ಹೀಗೆ ಮಾಡಿದಲ್ಲಿ ಇಳುವರಿ ಕಡಿಮೆಯಾಗುತ್ತದೆ.

**ಕಳೆ ನಿರ್ವಹಣೆ :** ಮರಳು ಭೂಮಿಯಲ್ಲಿ ಎಕರೆಗೆ 1 ಕಿ.ಗ್ರಾಂ. ಶೇ. 50 ಅಟ್ರಾಜಿನ್ ಅಥವಾ 1.0 ಲೀ. ಶೇ.30ಇ.ಸಿ. ಪೆಂಡಿಮೆಥಾಲಿನ್ ಅಥವಾ 170 ಮಿ.ಲೀ. ಶೇ.23.5 ಇ.ಸಿ. ಆಕ್ಸಿಫ್ಲೋರೋಫೇನ್ ನ್ನು 300ಲೀ. ನೀರಿನಲ್ಲಿ ಬೆರೆಸಿ ಬಿತ್ತಿದ 3 ದಿವಸಗಳೊಳಗಾಗಿ ಸಿಂಪರಣೆ ಮಾಡುವುದು. ಸಿಂಪರಣೆ ನಂತರ ಭೂಮಿಯನ್ನು ತುಳಿಯಬಾರದು ಮತ್ತು ಸಿಂಪರಣೆ ಸಮಯದಲ್ಲಿ ಸಾಕಷ್ಟು ತೇವಾಂಶವಿರಬೇಕು.

**ಮುಸುಕಿನ ಜೋಳದಲ್ಲಿ ಅಂತರ ಬೆಳೆಗಳು**

ದ್ವಿದಳ ಧಾನ್ಯದ ಬೆಳೆಗಳಾದ ಅಲಸಂದೆ, ಸೋಯಾಅವರೆ ಹಾಗೂ ಅವರೆ (ಹೆಚ್ಎ –3 ಮತ್ತು ಹೆಚ್ಎ–4 ತಳಿಗಳು) ಯನ್ನು 2:2ರ ಅನುಪಾತದಲ್ಲಿ ಬಿತ್ತುವುದರಿಂದ ಮಣ್ಣಿನ ಫಲವತ್ತತೆ ಹೆಚ್ಚುವುದು ಹಾಗೂ ಅಧಿಕ ಲಾಭವನ್ನು ಸಹ ಪಡೆಯಬಹುದು.

**ಸೂಚನೆ:**

- ಕಟಾವು ಮಾಡಿದ ಬೀಜವನ್ನು ಬಿತ್ತನೆಗೆ ಉಪಯೋಗಿಸುವುದಾದಲ್ಲಿ ಪ್ರತಿ ಕಿ.ಗ್ರಾಂ. ಬೀಜವನ್ನು ಅರ್ಧ ಲೀಟರ್ ನೀರಿಗೆ 0.04 ಮಿ.ಲೀ. ಸೈನೊಪಾಡ್–45 ಎಸ್.ಸಿ. ಬೆರೆಸಿದ ದ್ರಾವಣದಲ್ಲಿ ಲೇಪನ ಮಾಡಿ, ನೆರಳಿನಲ್ಲಿ ಒಣಗಿಸಿ ಗೋಣಿ ಚೀಲದಲ್ಲಿ ದಾಸ್ತಾನು ಮಾಡುವುದರಿಂದ 9 ತಿಂಗಳುಗಳ ಕಾಲ ಕೀಟಗಳಿಂದ ರಕ್ಷಿಸಬಹುದು.
- ಈ ಬೆಳೆಯನ್ನು ವರ್ಷದ ಎಲ್ಲಾ ಕಾಲಗಳಲ್ಲಿಯೂ ಬೆಳೆಯಬಹುದು. ಹಿಂದಿನ ವರ್ಷ ಬೂಜುರೋಗ ತಗುಲಿದ ಪ್ರದೇಶಗಳಲ್ಲಿ ಕನಿಷ್ಠ ಪಕ್ಷ ಎರಡು ವರ್ಷ ಬೆಳೆಯಬಾರದು.

**ಮುಖ್ಯವಾದ ಕಡಿಮೆ ಖರ್ಚಿನ ಬೇಸಾಯ ಕ್ರಮಗಳು**

- ಹಿಂದಿನ ವರ್ಷ ಬೂಜುರೋಗ ಬಂದಿದ್ದ ತಾಕುಗಳಲ್ಲಿ ತಡವಾದ ಮುಂಗಾರಿನಲ್ಲಿ ಬಿತ್ತನೆ ಮಾಡಬಾರದು.
- ಬುಡದಲ್ಲಿ ಬರುವ ಕವಲುಗಳನ್ನು ತಪ್ಪದೇ ತೆಗೆಯುವುದು.
- ಹಾಲು ತುಂಬುವ / ಕಾಳುಕಟ್ಟುವ ಸಮಯದಲ್ಲಿ ಗಿಡದ ತುದಿಯನ್ನು ಮುರಿಯಬಾರದು.
- ಬೀಜ ಮೊಳೆಯುವ, ಹೂ ಬಿಡುವ ಮತ್ತು ಕಾಳು ಕಟ್ಟುವ ಸಮಯಗಳಲ್ಲಿ ತಪ್ಪದೇ ನೀರು ಹಾಯಿಸುವುದು.
- ನೀರಾವರಿ ಬೆಳೆಗಳಿಗೆ ಶಿಫಾರಸ್ಸು ಮಾಡಿರುವ ತಳಿಗಳನ್ನೇ ಬಳಕೆ ಮಾಡುವುದು.
- ಬಿತ್ತನೆಯನ್ನು ಮೇ–ಜುಲೈ ಕೊನೆಯವರೆಗೂ ಮಾಡುವುದು.

## ಸಸ್ಯ ಸಂರಕ್ಷಣೆ: ಪ್ರಮುಖ ಕೀಟಗಳು, ರೋಗಗಳು ಹಾಗೂ ನಿರ್ವಹಣೆ

**ಕೀಟಗಳು**

| *ಕೀಟಗಳು* | *ಹಾನಿಯ ಲಕ್ಷಣಗಳು* | *ಪರಿಣಾಮಕಾರಿ ಕೀಟನಾಶಕಗಳು* | *ಪ್ರಮಾಣ ಮಿ.ಲೀ./ಗ್ರಾಂ ಲೀಟರ್ ನೀರಿಗೆ* | *ಎಕರೆಗೆ ಮಿ.ಲೀ./ ಕಿ.ಗ್ರಾಂ (ಪ್ರತಿ ಸಿಂಪರಣೆಗೆ)* | *ಬಳಸಬೇಕಾದ ಅವಧಿ/ ವಿಧಾನ* |
|---|---|---|---|---|---|
| **ಕಾಂಡಕೊರಕ** | ಸುಳಿಗರಿ ಹೊರಹೊಮ್ಮಿದಾಗ ಗರಿಗಳ ಮೇಲೆ ಸಣ್ಣಸಣ್ಣ ರಂಧ್ರಗಳು ಕಾಣಿಸಿಕೊಳ್ಳುತ್ತವೆ. ಸುಳಿ ಒಣಗುವುದು. ಅಂತಹ ಸುಳಿಗಳನ್ನು ಕೈಯಿಂದ ಎಳೆದರೆ ಸುಲಭವಾಗಿ ಹೊರಬರುತ್ತವೆ. | ಕ್ವಿನಾಲ್‌ಫಾಸ್ 25 ಇ.ಸಿ<br>ಕ್ಲೋರ್‌ಪೈರಿಪಾಸ್ 20 ಇ.ಸಿ | 2 ಮಿ.ಲೀ<br>2 ಮಿ.ಲೀ | 1 ಲೀ<br>1 ಲೀ | ಬಿತ್ತನೆಯಾದ 20–25 ದಿನಗಳಲ್ಲಿ ಸಿಂಪರಣಾ ರೂಪದ ಕೀಟನಾಶಕ ಬಳಕೆ. ಬೇಕಿದ್ದರೆ ಮತ್ತೊಂದು ಸಿಂಪರಣೆ. |
| **ಸಸ್ಯಹೇನು** | ನೂರಾರು ಸಸ್ಯ ಹೇನುಗಳು ಸುಳಿ ಗರಿ, ಮಧ್ಯದ ಗರಿಗಳಿಂದ ರಸ ಹೀರುತ್ತಿರುತ್ತವೆ. ಅಂತಹ ಗರಿಗಳು ಹಳದಿ ಬಣ್ಣಕ್ಕೆ ತಿರುಗುತ್ತವೆ. ತಳ ಗರಿಗಳಲ್ಲಿ ಕಪ್ಪು ಬೂಷ್ಟು ಬೆಳೆದು ಗಿಡಗಳ ಬೆಳವಣಿಗೆ ಕುಂಠಿತವಾಗುವುದು. | ಕ್ವಿನಾಲ್‌ಫಾಸ್ 25 ಇ.ಸಿ<br>ಕ್ಲೋರ್‌ಪೈರಿಪಾಸ್ 20 ಇ.ಸಿ | 2 ಮಿ.ಲೀ<br>2 ಮಿ.ಲೀ | 500 ಮಿ.ಲೀ<br>500 ಮಿ.ಲೀ | ಸಸ್ಯಹೇನು ಕಾಣಿಸಿಕೊಂಡಾಗ ಎಕರೆಗೆ 250 ಲೀ ಸಿಂಪರಣಾ ದ್ರಾವಣ ಬಳಸುವುದು. |
| **ತೆನೆ ಹುಳು** | ತೆನೆಯ ರೇಷ್ಮೆಯಂತಹ ಕೂದಲನ್ನು ತಿನ್ನುತ್ತವೆ. ಅರೆ ಬಲಿತ ಕಾಳುಗಳನ್ನು ತಿನ್ನುತ್ತವೆ. | ಮಾಲಾಥಿಯಾನ್ ಶೇ.5 ಡಿ<br>ಮಾಲಾಥಿಯಾನ್ 50 ಇ.ಸಿ | 2 ಮಿ.ಲೀ | 8 ಕಿ.ಗ್ರಾಂ<br>500 ಮಿ.ಲೀ | ತೆನೆಗಳ ತುದಿಯ ಮೇಲೆ ಧೂಳೀಕರಿಸಿ ಅಥವಾ ಸಿಂಪಡಿಸುವುದು. |
| **ಉಗ್ರಾಣದ ಕೀಟಗಳು** | ಹುಳುಗಳು ಬೀಜಗಳನ್ನು ಕೊರೆಯುವುದರಿಂದ ಬೀಜದಲ್ಲಿ ರಂಧ್ರ, ಮೊಳಕೆ ಪ್ರಮಾಣ ಕಂಡುಬಂದು ಕ್ಷೀಣಿಸುತ್ತವೆ. | ಸ್ಫೈನೋಸಾಡ್ 45 ಎಸ್.ಸಿ | – | – | ಉಗ್ರಾಣದ ಕೀಟಗಳಿಂದ ಮುಸುಕಿನಜೋಳದ ಬೀಜಗಳನ್ನು ಸಂರಕ್ಷಿಸಲು 0.4 ಮಿ.ಲೀ ಸ್ಫೈನೋಸಾಡ್ 45 ಎಸ್‌ಸಿ 50 ಮಿ.ಲೀ ನೀರಿನಲ್ಲಿ ಬೆರೆಸಿ 10 ಕಿ.ಗ್ರಾಂ ಬೀಜಕ್ಕೆ ಲೇಪನ ಮಾಡಿ, ನೆರಳಿನಲ್ಲಿ ಒಣಗಿಸಿ ಸಂಗ್ರಹಿಸುವುದರಿಂದ ಉಗ್ರಾಣದ ಕೀಟಗಳಿಂದ 9 ತಿಂಗಳು ಬೀಜವನ್ನು ಸಂಕ್ಷಿಸಬಹುದು |

# ಮುಸುಕಿನ ಜೋಳದ ಪ್ರಮುಖ ಕೀಟ ಮತ್ತು ರೋಗಗಳು



ಕಾಂಡ ಕೊರೆಯುವ ಹುಳು



ಕೇದಿಗೆ ರೋಗ



ಎಲೆ ಅಂಗಮಾರಿ ರೋಗ



ತುಕ್ಕು ರೋಗ

**ರೋಗಗಳು**

| ರೋಗಗಳು | ಮುಖ್ಯವಾದ ಚಿಹ್ನೆಗಳು | ರೋಗನಾಶಕಗಳು | 1 ಲೀ ನೀರಿಗೆ ಬೇಕಾಗುವ ಪ್ರಮಾಣ | ಎಕರೆಗೆ ಬೇಕಾಗುವ ಪ್ರಮಾಣ | ಉಪಯೋಗಿಸಬೇಕಾದ ಕಾಲ ಮತ್ತು ವಿಧಾನ |
|---|---|---|---|---|---|
| **ಬೂಜು ರೋಗ ಅಥವಾ ಕೇದಿಗೆ ರೋಗ** | ಎಲೆಗಳ ತಳಭಾಗದಲ್ಲಿ ಬಿಳಿಯ ಶಿಲೀಂಧ್ರ ಬೆಳವಣಿಗೆ ಕಂಡು ಬರುತ್ತದೆ. ಸಸಿಗಳು ಹಳದಿ ಬಣ್ಣಕ್ಕೆ ತಿರುಗಿ ಗಿಡದ ಬೆಳವಣಿಗೆ ಕುಂಠಿತವಾಗುತ್ತದೆ. | ಮೆಟಲಾಕ್ಸಿಲ್ 8 + ಮ್ಯಾಂಕೋಜೆಬ್ 64%ಮಿಶ್ರಣ 72 ಡಬ್ಲ್ಯೂ.ಪಿ | 3.0 ಗ್ರಾಂ / ಪ್ರತಿ ಕಿ.ಗ್ರಾಂ ಬೀಜಕ್ಕೆ | 15 ಗ್ರಾಂ ಪ್ರತಿ 5 ಕಿ.ಗ್ರಾಂ ಬೀಜಕ್ಕೆ | ಬೀಜೋಪಚಾರ ಮಾಡಿ ಬಿತ್ತನೆ ಕೈಗೊಳ್ಳುವುದು ಸೂಕ್ತ. |
| **ತುಕ್ಕು ರೋಗ** | ಕಂದು ಬಣ್ಣದ ಚುಕ್ಕೆಗಳು ಎಲೆಯ ತಳ ಭಾಗದಲ್ಲಿ ಕಾಣಿಸುತ್ತವೆ. | ಮ್ಯಾಂಕೋಜೆಬ್ 75 ಡಬ್ಲ್ಯೂ.ಪಿ | 2.5 ಗ್ರಾಂ | 625 ಗ್ರಾಂ | ಬಿತ್ತನೆಯಾದ 50 ದಿನಗಳ ನಂತರ ರೋಗದ ತೀವ್ರತೆಗೆ ಅನುಗುಣವಾಗಿ ಪ್ರತಿ ಸಿಂಪರಣೆಗೆ 250 ಲೀ ದ್ರಾವಣದಿಂದ 3 ಬಾರಿ ಸಿಂಪಡಿಸುವುದು. |
| **ಎಲೆ ಅಂಗ ಮಾರಿ ರೋಗ** | ಕಂದು ಬಣ್ಣದ ಚುಕ್ಕೆಗಳು ಕಾಣಿಸಿಕೊಂಡು, ನಂತರ ಎಲೆ ಒಣಗುತ್ತದೆ | ಮ್ಯಾಂಕೋಜೆಬ್ 75 ಡಬ್ಲ್ಯೂ.ಪಿ | 2.5 ಗ್ರಾಂ | 500–625 ಗ್ರಾಂ | ರೋಗ ಲಕ್ಷಣಗಳು ಕಂಡಕೂಡಲೇ ಎಕರೆಗೆ 250 ಲೀ ಸಿಂಪರಣಾ ದ್ರಾವಣ ಬಳಸಿ ಸಿಂಪಡಿಸುವುದು. |

**ಬೂಜು ರೋಗ** – ಪ್ರತಿ ಕಿ.ಗ್ರಾಂ ಬಿತ್ತನೆ ಬೀಜವನ್ನು 2 ಗ್ರಾಂ ಅಜೋಕ್ಸಿಸ್ಟ್ರೋಬಿನ್ ಶಿಲೀಂಧ್ರನಾಶಕದಿಂದ ಬೀಜೋಪಚಾರ ಮಾಡಿ ಬಿತ್ತುವುದು.